**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**
**ಸಿಸಿ ನಂ.42/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿರುಃ

1. ಕವಿತಾ ಗಂಡ ರೇವಣಪ್ಪ ಕಂಟಿಗೇರ
   ವಃ 26 ವರ್ಷ, ಉಃ ಕಿರಾಣಿ ವ್ಯಾಪಾರ
   ಸಾಃ ನೂಲಾಗಲ್ಲಿ ಸೇಡಂ

2. ಸಿದ್ದಲಿಂಗ ತಂದೆ ಬಸ್ಸಣ್ಣ ಮಣಿಗಿರಿ
   ವಃ 28 ವರ್ಷ, ಉಃ ಪ್ಲಂಬರ ಕೆಲಸ
   ಸಾಃ ಬೀರನಳ್ಳಿ, ತಾಃ ಸೇಡಂ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 22-10-2020ರಂದು ಸಾಯಂಕಾಲ 07-00 ಗಂಟೆ ಸುಮಾರಿಗೆ ಸೇಡಂ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ನೂಲಾಗಲ್ಲಿಯಲ್ಲಿ ಚಾಸಾ.1 ನೇದ್ದವಳು ಅರೋಪಿ 1 ನೇದ್ದವಳಿಗೆ ತಾನು ಈ ಹಿಂದೆ ನೀಡಿದ 2000/- ರೂ. ಗಳನ್ನು ಕೊಡುವಂತೆ ಕೇಳಲು ಹೋದಾಗ ಆರೋಪಿ 1 ನೇದ್ದವಳು ನಾನು ನಿನಗೆ ಯಾವ ಹಣ ಕೊಡುವುದು ಬಾಕಿ ಇಲ್ಲ, ಎಲ್ಲಾ ಕೊಟ್ಟಿದ್ದೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಗಳವಾಡುತ್ತಿರುವಾಗ ಚಾಸಾ4 ರಿಂದ 7ನೇದ್ದವರು ಜಗಳ ಬಿಡಿಸಲು ಹೋದಾಗ ಆರೋಪಿ 2 ನೇದ್ದವನು ಚಾಸಾ.4ನೇದ್ದವನಿಗೆ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 341 ಸಂಗಡ 34ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುವುದು ಇರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ, ಆರೋಪಿ.1ನೇದ್ದವಳು ಚಾಸಾ.1 ನೇದ್ದವಳೊಂದಿಗೆ ಜಗಳ ತೆಗೆದು ಕುಸ್ತಿಗೆ ಬಿದ್ದು, ಕೂದಲು ಹಿಡಿದು ಎಳೆದಾಡಿದ್ದು ಹಾಗೂ ಆರೋಪಿ 2 ನೇದ್ದವನು ಚಾಸಾ.4 ನೇದ್ದವಗೆ ಮಗನೇ ನೀನು ಕವಿತಾಗೆ ಯಾಕೆ ಬೈಯುತ್ತಿದ್ದಿ ಅಂತಾ ಕೈಯಿಂದ ಮೈಮೇಲೆ ಹೊಡೆದದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 323 ಸಂಗಡ 34ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುವುದು ಇರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿ.1 ನೇದ್ದವಳು

ಚಾಸಾ.1ನೇದ್ದವಳಿಗೆ ನಾನು ನಿನಗೆ ಯಾವ ಹಣ ಕೊಡುವುದು ಬಾಕಿ ಇಲ್ಲ, ಎಲ್ಲಾ ಕೊಟ್ಟಿದ್ದೇನೆ ರಂಡಿ ನಿನ್ನಿಂದ ಸಾಕಾಗಿದೆ ಅಂತಾ ಹಾಗೂ ಜಗಳ ಬಿಟ್ಟು ಹೋಗುವಾಗ ಆರೋಪಿತರು ರಂಡಿ ಭೋಸಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ಸಂಗಡ 34ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿ 1 ಮತ್ತು 2ರವರು ಚಾಸಾ.1 ಮತ್ತು 4ನೇದ್ದವರೊಡನೆ  ಜಗಳ ತೆಗೆದು, ಸದರಿಯವರು ಜಗಳ ಬಿಟ್ಟು ಹೋಗುವಾಗ  ರಂಡಿ ಭೋಸಡಿ ನೀನು ಇನ್ನೊಮ್ಮೆ ನಮಗೆ ಹಣ ಕೇಳಿದರೆ ಜೀವಸಹಿತ ಬಿಡಲ್ಲ ಅಂತಾ ಜೀವದ ಬೆದರಿಕೆ ಹಾಕಿ ಹೋಗಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 506 ಸಂಗಡ 34ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 11-06-2025 ಪ್ರ.ದ.ನ್ಯಾ .ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**
**ಸಿಸಿ ನಂ.42/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿತರು 1ಃ ಕವಿತಾ ಗಂಡ ರೇವಣಪ್ಪ ಕಂಟಿಗೇರ
ವಃ 26 ವರ್ಷ, ಉಃ ಕಿರಾಣಿ ವ್ಯಾಪಾರ
ಸಾಃ ನೂಲಾಗಲ್ಲಿ ಸೇಡಂ ಹಾಗೂ ಇನ್ನೊಬ್ಬರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 11-06-2025 ಪ್ರ.ದ.ನ್ಯಾ.ದಂ. ಸೇಡಂ.